ಇ) ಮಲಪ್ರಭಾ ಯೋಜನೆಯಡಿಯಲ್ಲಿ ಮುಳುಗಡೆಯಾದ ಜನರ ಅನುಕೂಲತೆಗಾಗಿ ಕೂಡಲೇ ಆಗಮೆಂಟೇಶನ್ ಆಫ್-ಲಿಫ್ಟ್ ಇರಿಗೇಷನ್ ಸ್ಕೀಮ್‌ಗೆ ಮಂಜೂರಾತಿ ನೀಡಲಾಗುವುದೆ?

ಈ) ಈ ಏತ ನೀರಾವರಿಯಿಂದ ಎಷ್ಟು ಎಕರೆಗೆ ನೀರಾವರಿ ಆಗುವುದು? ಹಾಗೂ ಈ ಕೆಲಸಕ್ಕೆ ಎಷ್ಟು ವೆಚ್ಚ ತಗಲುವುದು.

ಶ್ರೀ ಎಚ್.ಕೆ. ಪಾಟೀಲ (ಜಲ ಸಂಪನ್ಮೂಲಸಚಿವರು) :—

ಅ) ನಿಜ.

ಆ) ಸದರಿ ಯೋಜನೆಗೆ ಸಂಬಂಧಿಸಿದ ರೂ. 169.65 ಲಕ್ಷಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸೆಪ್ಟೆಂಬರ್-98ರಲ್ಲಿ ಬರೆದಿದೆ.

ಇ) ಮುಖ್ಯ ಇಂಜಿನಿಯರ್‌ರವರು ಸಲ್ಲಿಸಿರುವ ಪ್ರಸ್ತಾವನೆಯು ಮಲಪ್ರಭಾ ಯೋಜನೆಯಡಿ ಬರುವುದರಿಂದ ಇದನ್ನು ಕರ್ನಾಟಕ ನೀರಾವರಿ ನಿಗಮದಿಂದ ತಾಂತ್ರಿಕವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮರವರಿಗೆ 1999ರಲ್ಲಿ ಸೂಚಿಸಲಾಗಿದೆ. ಈ ಯೋಜನೆಗೆ ಬೇಕಾಗುವ ನೀರಿನ ಪ್ರಮಾಣದ ಬಗ್ಗೆ ನಿಗಮದಿಂದ ಪರಿಶೀಲಿಸಲಾಗುತ್ತಿದೆ. ವಿವರವಾದ ಯೋಜನಾ ವರದಿ ತಯಾರಿಸಿದ ನಂತರ ಮಂಜೂರಾತಿ ನೀಡಲಾಗುವುದು.

ಪ್ರಸ್ತಾಪಿತ ಯೋಜನೆಯಿಂದ ಕೊನೆಯ ಭಾಗದ ಸುಮಾರು 991.14 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸಬಹುದಾಗಿದೆ. 2001-2002ನೇ ಸಾಲಿನ ದರಗಳಂತೆ ಈ ಯೋಜನೆಯ ವೆಚ್ಚವು 192.21 ಲಕ್ಷ ಎಂದು ಅಂದಾಜಿಸಲಾಗಿದೆ.

ಬೈಲಹೊಂಗಲ ನಗರದಲ್ಲಿ ಒಳಚರಂಡಿ ಯೋಜನೆಯನ್ನು ಕೈಗೊಳ್ಳುವುದು.

2368(3031) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಒಳಚರಂಡಿ ಯೋಜನೆಯ ಸಲುವಾಗಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆಯೇ; ಹಾಗೂ ಎಂದು ತಯಾರಿಸಲಾಗಿದೆ;

2. ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ ಈ ಯೋಜನೆಗೆ ತಗಲುವ ವೆಚ್ಚವೆಷ್ಟು?

3. ಈ ಯೋಜನೆಗೆ ಹಿಂದಿನ ಮುಖ್ಯಮಂತ್ರಿಯವರು ಮಂಜೂರಾತಿಕೊಡುವ ಸಲುವಾಗಿ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಇಡಲು ಆದೇಶ ನೀಡಿದ ಸಂಗತಿ ನಿಜವೇ?

4. ಹಾಗಿದ್ದಲ್ಲಿ, ಈ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಇಟ್ಟು ಮಂಜೂರಾತಿ ಪಡೆಯಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ಹೌದು, ತಯಾರಿಸಲಾಗಿದೆ. ಸದರಿ ಯೋಜನೆಯನ್ನು 1998-99ನೇ ಸಾಲಿನಲ್ಲಿ ತಯಾರಿಸಲಾಗಿದೆ.

2. ಈ ಯೋಜನೆ 589,00 ಲಕ್ಷ ರೂ.ಗಳ ಅಂದಾಜನ್ನು ತಯಾರಿಸಿದ್ದು, ಯೋಜನಾ ವೆಚ್ಚದ ಶೇ. 20ರಷ್ಟು ಅಂದರೆ 117.80 ಲಕ್ಷ ರೂ.ಗಳನ್ನು ಪುರಸಭೆಯ ವಂತಿಗೆಯಾಗಿ ತುಂಬಲು ಪುರಸಭೆಗೆ ತಿಳಿಸಲಾಗಿದೆ. ಇದನ್ನು ತುಂಬಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು

3. ಸರ್ಕಾರದ ಗಮನಕ್ಕೆ ಬಂದಿಲ್ಲ.

4. ಮೇಲೆ 2ರಲ್ಲಿ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಗ್ರಾಮಾಂತರ ಪ್ರದೇಶದ ಬಡಜನರಿಗೆ ಆಹಾರ ಪಡಿತರ ಚೀಟಿ.

2369(3406) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಸಿರು ಕಾರ್ಡ್ ವಿತರಣೆ ಕೇವಲ ಕೊಳಚೆ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದಲ್ಲಿನ ಬಡ ಜನರಿಗೆ ಮಾತ್ರ ನೀಡಲಾಗುತ್ತಿರುವುದು ನಿಜವಲ್ಲವೇ?

ಆ) ಬಡಜನರು ನಗರ ಪ್ರದೇಶಗಳಲ್ಲಿ ಇಲ್ಲವೆ; ಇವರ ಬಗ್ಗೆ ಸರ್ಕಾರದ ಚಿಂತನೆ ಏನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) -ಹೌದು-

ಆ) ಇದ್ದಾರೆ